ವಾರದ ಪತ್ರ

## ಹೃದಯ ಗೆದ್ದ 'ಮಹಾನಾಯಕ'

ಝೀ ಕನ್ನಡದ 'ಮಹಾನಾಯಕ' ದಿನದಿಂದ ದಿನಕ್ಕೆ ಪ್ರೇಕ್ಷಕರ ಹೃದಯ ಗೆಲ್ಲುತ್ತಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನ ಚರಿತ್ರೆಯ ಜೊತೆ ಸಮಾಜದಲ್ಲಿ ಬೇರೂರಿದ್ದ ಜಾತೀಯತೆಯ ಕರಾಳಮುಖವನ್ನು ಕಣ್ಣಿಗೆ ಕಟ್ಟಿಕೊಟ್ಟಿದ್ದಾರೆ. ಕೆಲವು ಮಹತ್ವದ ಘಟನೆಗಳನ್ನು ತುಂಬಾ ನೈಜವಾಗಿ ಚಿತ್ರಿಸಲಾಗಿದೆ. ಅಷ್ಟೊಂದು ಅಮಾನವೀಯ ಜನರು ಇದ್ದರೇ ಎಂದು ಈಗಲೂ ಹುಬ್ಬೇರಿಸುವಂತಾಗಿದೆ. ಮಾನವೀಯ ದೃಷ್ಟಿಯಿಂದ ಧಾರಾವಾಹಿ ವೀಕ್ಷಿಸುವ ಜನರ ಹೃದಯ ಮಿಡಿಯುವಲ್ಲಿ ಸಂದೇಹವಿಲ್ಲ.

ಮತ್ತೊಂದು ಅಂಶವೆಂದರೆ ಪ್ರತಿ ಪಾತ್ರಕ್ಕೂ ದನಿಯಾದ ಕಂಠದಾನಿಗಳ ಶ್ರಮ ಮತ್ತು ಶ್ರದ್ಧೆ. ಇದರ ಫಲ ಕನ್ನಡದ ಧಾರಾವಾಹಿಯೆಂದೇ ಪ್ರೇಕ್ಷಕರು ಭಾವಿಸುತ್ತಾರೆ ಮಕ್ಕಳಿಗೂ ತುಂಬಾ ಆಪ್ತವಾಗಿದೆ. ಎಲ್ಲ ವರ್ಗದ ಜನರ ಗಮನ ಸೆಳೆಯುವಲ್ಲಿ ಮಾಹಾನಾಯಕ ಯಶಸ್ವಿಯಾಗಿದೆ.

—ಮೀನಾಕ್ಷಿ ಕೆ. ರಾಮುಗುಂಡಿ ಬೈಲಹೊಂಗಲ

## ಪೇಲವ ಯುದ್ಧ ದೃಶ್ಯ

ಸ್ಟಾರ್ ಸುವರ್ಣದ ಮಹೋನ್ನತ ಡಬ್ಬಿಂಗ್ ಧಾರಾವಾಹಿ 'ಮಹಾಭಾರತ' ವೀಕ್ಷಕರನ್ನು ತುದಿಗಾಲ ಮೇಲೆ ನಿಲ್ಲುವಂತೆ ರೋಚಕವಾಗಿದೆ. ಆದರೆ ಯುದ್ಧ ಆರಂಭದ ನಂತರ ಇನ್ನಷ್ಟು ರೋಮಾಂಚನ ಸಿಗಬಹುದೆಂಬ ಕಾತುರದಿಂದಿದ್ದ ವೀಕ್ಷಕರಿಗೆ ಈಗ ಭಾರಿ ನಿರಾಶೆಯಾಗುತ್ತಿದೆ. ಇದಕ್ಕೆ ಕಾರಣ ನೀರಸವಾಗಿರುವ ಯುದ್ಧ ದೃಶ್ಯಗಳು. ಯುದ್ಧದ ಹಿಂದಿನ ದೃಶ್ಯಗಳಲ್ಲಿ ಕಂಡು ಬಂದ ತಾಜಾತನವನ್ನು ಈ ಧಾರಾವಾಹಿ ನಿರ್ದೇಶಕರು, ಯುದ್ಧದ ದೃಶ್ಯಗಳಲ್ಲಿಯೂ ತೋರಿಸಬೇಕಾಗಿತ್ತು. ಆಗ ಮಹಾಭಾರತ ಧಾರಾವಾಹಿಯನ್ನು 'ಮಹಾನ್' ಎನ್ನಬಹುದಿತ್ತು.

—ಜಿ. ರಾಜಣ್ಣ, ದಾವಣಗೆರೆ

## ದೊಡ್ಮನೆ ಹುಡುಗನ ದೊಡ್ಮನಸು

ಕಲರ್ಸ್ ಸೂಪರ್‌ನಲ್ಲಿ 'ಮಜಾ ಟಾಕೀಸಿನ' ಹೊಸ ಸಂಚಿಕೆ ಸಿಕ್ಸರ್ ಬಾರಿಸಿದೆ. ಪುನೀತ್ ಅವರೊಂದಿಗಿನ ಮಾತುಕತೆ ಸೊಗಸಾಗಿತ್ತು. ಸೃಜನ್ 'ಒಳ್ಳೆ ಡಾನ್ಸರ್ ಕಂಡಾಗ ಹೊಟ್ಟೆ ಉರಿದುಕೊಳ್ಳುತ್ತಿರಾ?' ಎಂದು ಕೇಳಿದ ಪ್ರಶ್ನೆಗೆ ಪುನೀತ್ ಅವರು ಸಮಕಾಲೀನ ಸಿನಿಮಾ ನಟರನ್ನು ಉದಾಹರಿಸಿ ಅವರಿಂದ ತಾನು ಕಲಿಯುತ್ತೇನೆ ಎಂದು ಅವರನ್ನು ಅಭಿನಂದಿಸಿದ್ದರು. ಇದು ದೊಡ್ಮನೆ ಹುಡುಗನ ದೊಡ್ಡ ಮನಸ್ಸನ್ನು ಅನಾವರಣಗೊಳಿಸಿತು. ಹಮ್ಮು ಬಿಮ್ಮು ಇಲ್ಲದೆ, ತಾನೊಬ್ಬ ಹೆಸರಾಂತ ನಟನೆಂಬ ಅಹಂ ನೆತ್ತಿಗೇರದೆ, ಮುಗ್ಧ ಬಾಲಕನಂತೆ ಶೋದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮ ಇದೇ ಗುಣಮಟ್ಟವನ್ನು ಕಾಪಾಡಿಕೊಂಡು ಮುನ್ನಡೆಯಲಿ ಎಂದು ಆಶಿಸುತ್ತೇನೆ.

—ಶ್ರೀರಂಜನಿ, ಬೆಂಗಳೂರು

## ಗುಣಕ್ಕೆ ಮತ್ಸರ ಉಂಟೇ?

ಕಲರ್ಸ್ ಸೂಪರ್‌ನಲ್ಲಿ 'ಮಜಾ ಟಾಕೀಸ್'ನಲ್ಲಿ ಅತಿಥಿ ಪುನೀತ್ ರಾಜ್‌ಕುಮಾರ್ ಭರ್ಜರಿ ಮನರಂಜಿಸಿದರು. ಸೃಜನ್ ಲೋಕೇಶ್ 'ನಿಮಗೆ ಯಾವ ನಟರ ಡಾನ್ಸ್ ಇಷ್ಟ?' ಎಂಬ ಪ್ರಶ್ನೆಗೆ ಅಪ್ಪು ಉತ್ತರಿಸಿದ್ದು ಹೀಗೆ.

'ನನಗೆ ತುಂಬಾ ನಟರ ಡಾನ್ಸ್ ಇಷ್ಟ, ಸಣ್ಣವನಿದ್ದಾಗ ಮೈಕಲ್ ಜಾಕ್ಸನ್ ಅಚ್ಚುಮೆಚ್ಚಾಗಿತ್ತು. ನಂತರ ಜವೇದ್ ಜಾಫ್ರಿ ಅಂತ ಒಬ್ಬರಿದ್ದರು, ಅವರಂತೂ ಫೆಂಟಾಸ್ಟಿಕ್! ಇನ್ನು ಹೃತಿಕ್ ರೋಷನ್ ಅದ್ಭುತ! ಹಾಗೇ ದಕ್ಷಿಣಕ್ಕೆ ಬಂದರೆ ತಮಿಳಿನಲ್ಲಿ ಧನುಷ್, ವಿಜಯ್, ತೆಲುಗಿನಲ್ಲಿ ಅಲ್ಲು ಅರ್ಜುನ್, ರಾಮ್ ಚರಣ್, ನಮ್ಮ ಕನ್ನಡದಲ್ಲಿ ಧ್ರುವ, ಯಶ್ ಸಕತ್ ಡಾನ್ಸ್ ಮಾಡ್ತಾರೆ'.

ತಾನೇ ಉತ್ತಮ ನೃತ್ಯಪಟುವಾಗಿದ್ದು, ತನ್ನ ಸಮಕಾಲೀನ ನಟರ ಪ್ರತಿಭೆಯನ್ನು ಬಿಚ್ಚು ಮನದಿಂದ ಹೊಗಳುವ ಪುನೀತ್‌ರ ನಡೆ ನಿಜಕ್ಕೂ ಶ್ಲಾಘನೀಯ!

—ಕೆ. ಶ್ರೀನಿವಾಸರಾವ್. ಹರಪನಹಳ್ಳಿ




## ಇರುವೆ ಬಿಟ್ಟುಕೊಂಡಂತೆ?

ಕಲರ್ಸ್‌ನ 'ನನ್ನರಸಿ ರಾಧೆ'ಯಲ್ಲಿ ಅಗಸ್ತ್ಯನಿಗೆ ತಾಯಿಯ ಬಗ್ಗೆ ಸತ್ಯ ತಿಳಿದರೆ ಏನು ಅನಾಹುತ ಆಗಬಹುದು ಎಂಬ ಕಲ್ಪನೆ ಇನ್ನೂ ಹೊಳೆದಿಲ್ಲ ಎಂದು ಕಾಣುತ್ತದೆ. ಆರಂಭದಿಂದ ಇಲ್ಲಿಯವರೆಗೆ ಇದು ಸ್ವತಃ ಅವರೇ ಬಿಟ್ಟುಕೊಂಡಿರುವ ಇರುವೆ ಎಂದರೆ ತಪ್ಪಾಗಲಾರದು. ಇನ್ನು ಧಾರಾವಾಹಿಗಳಲ್ಲಿ ನಾಯಕನ ಪ್ರೇಯಸಿ ಬಗ್ಗೆ ಮತ್ತೊಬ್ಬ ಅವತರಿಸಿದರೆ ಅವನು ಖಡಾಖಂಡಿತ ಖಳನಾಯಕನೇ ಆಗಿರಬೇಕು. ಆದರೆ ಇಲ್ಲಿ ಅವನು ವಿದ್ಯಾವಂತ. ಅಲ್ಲದೆ ವಿದೇಶದಲ್ಲಿ ಕೆಲಸ ಮಾಡುತ್ತಿರುವವನು. ಅವನು ನಾಯಕಿಯನ್ನು ಮದುವೆಯಾಗಲು ಒಪ್ಪಿಕೊಳ್ಳುತ್ತಾನೆ (ಇದರ ಮಧ್ಯೆ ನಾಯಕನಾಯಕಿಯ ಕುಟುಂಬದ ಮಧ್ಯೆ ಅನೇಕ ಭಿನ್ನಾಭಿಪ್ರಾಯಗಳು ಬಂದಿರುತ್ತದೆ. ಅದು ವೀಕ್ಷಕರಿಗೆ ಮಾತ್ರ ಗೊತ್ತು) ಆ ಹುಡುಗನಿಗೂ ಅಲ್ಪ– ಸ್ವಲ್ಪ ಗೊತ್ತು. ಆದರೂ ಯಾವುದೋ ಸಿಟ್ಟಿಗೆ ನಾಯಕನನ್ನು ಮುಂದಿನ ಎಲ್ಲಾ ಶುಭ ಸಮಾರಂಭಕ್ಕೂ ಬಂದು ಪಾಲ್ಗೊಳ್ಳುವಂತೆ ಆಹ್ವಾನ ನೀಡುತ್ತಾನೆ. ಇದು ಸ್ವತಃ ಆ ಹುಡುಗ ಬಿಟ್ಟುಕೊಂಡ ಇರುವೆ. ಮುಂದೆ ಯಾರು ಬೇಕಾದರೂ ಊಹಿಸಬಹುದು, ಈ ಮದುವೆ ಆ ಹುಡುಗನ ಜೊತೆ ನಡೆಯುವುದಿಲ್ಲ ಎಂದು.

ಇನ್ನು ಧಾರಾವಾಹಿಯಲ್ಲಿ ನಾಯಕಿ ಹಾಗೂ ಅವಳ ತಾಯಿಯ ಅಳುಮುಂಜಿ ಮುಖ ಸಹಿಸಿಕೊಳ್ಳುವುದು ತುಂಬಾ ಕಷ್ಟ 'ಅತ್ಯುತ್ತಮ ಅಳುಮುಂಜಿಗಳು' ಪ್ರಶಸ್ತಿಯನ್ನು ವಾಹಿನಿಯುವರು ಈ ಇಬ್ಬರಿಗೆ ಖಂಡಿತ ಕೊಡಬಹುದು. ಖಳನಾಯಕಿಯರು ನಾಲ್ವರಿದ್ದಾರೆ, ಅದರಲ್ಲಿ ಯಾರಿಗೆ ಬರಬಹುದೆಂಬ ಕುತೂಹಲ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಡಬ್‌ಗಿಂತ ಅಡಿಬರಹವೇ ಬೆಸ್ಟ್

ಹಲವು ಚಾನೆಲ್‌ಗಳಲ್ಲಿ ಕೆಲವು ಹಿಂದಿ ಧಾರಾವಾಹಿಗಳು ಕನ್ನಡ ಭಾಷಾಂತರದಲ್ಲಿ ಬರುತ್ತಿವೆ. ಇದರಲ್ಲಿನ ದೋಷವೆಂದರೆ ಸಂಭಾಷಣೆ ಮತ್ತು ತುಟಿ ಚಲನೆಗೆ ತಾಳ ಮೇಳ ಇಲ್ಲದಿರುವುದು. ದೃಶ್ಯ ಮಾಧ್ಯಮದಲ್ಲಿ ಇಜ್ಜೋಡು ಇಲ್ಲದಿದ್ದರೆ ನೋಡಲು ಸರಿ ಕಾಣುವುದಿಲ್ಲ. ಇದರ ಬದಲಿಗೆ ಕನ್ನಡದಲ್ಲಿ ಅಡಿ ಬರಹ ಹಾಕಿದ್ದರೆ ಉತ್ತಮವಾಗಿರುತ್ತಿತ್ತು.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಶಿಕ್ಷಕರ ದಿನ

ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ಗುರುವಂದನೆ ದೃಶ್ಯ ಮನೆಮಂದಿಗೆಲ್ಲಾ ಸಂತೋಷ ಉಂಟು ಮಾಡಿತು. ಕನ್ನಡ ಭಾಷೆಗೆ ಗೌರವ ಹೆಮ್ಮೆ ಹೆಚ್ಚಿಸಿ, ಅದರ ವ್ಯಾಕರಣ– ಕಾಗುಣಿತ ಸರಿ ಮಾಡುವುದು ಚೆನ್ನಾಗಿದೆ. 'ಶುಭಾಶಯ' ದಲ್ಲಿ ಹರ್ಷ ಗುರುತಿಸಿ 'ಷಣ್ಮುಖಿ' 'ಷ' ಇರಬೇಕಲ್ಲವಾ ಅಂದಾಗ ಅದರ ವಿವರಣೆ ಶುಭ 'ಆಶಯ' ತಿಳಿಸಿದ್ದು ಚೆನ್ನಾಗಿತ್ತು. ಶಿಕ್ಷಕರ ದಿನಾಚರಣೆಗೆ ಪ್ರಾಶಸ್ತ್ಯ ಕೊಟ್ಟು ನಿರೂಪಿಸಿದ್ದು ವಿಶೇಷವೇ ಸರಿ.

—ಸೀತಾ ಕೇಶವ, ಸಿಡ್ನಿ